**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.**

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 665/2019 .

ಪ್ರಾ.ಸಾ.ಃ2

ಚಾ.ಸಾ.ಃ2

ಹೆಸರು ಃ ಎಂ ಡಿ ಗುಲ್ಷನ್
ತಂದೆಯ ಹೆಸರು ಃ ಎಂ ದಿನೇಶ್
ವಯಸ್ಸು ಃ 28 ವರ್ಷ
ಉದ್ಯೋಗ ಃ ಫೀಲ್ಡ್ ಅಸಿಸ್ಟಂಟ್ ,ಫಾರೆಸ್ಟ್ ಕಾಲೇಜ್,ಪೊನ್ನಂಪೇಟೆ
ವಿಳಾಸ ಃ ಪೊನ್ನಂಪೇಟೆ.

... ........................................................................................................ ...

ದಿನಾಂಕ 28 ನೇ ಮಾರ್ಚ್ 2022 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ ಃ -

ದಿನಾಂಕ 27.01.2019 ರಂದು ಸಂಜೆ 6 ಗಂಟೆಯ ಸುಮಾರಿಗೆ ನಾನು ಮತ್ತು ಆರೋಪಿಯು ಅವರಿಗೆ ಸೇರಿದ ಸ್ಕೂಟಿಯಲ್ಲಿ ಗೋಣಿಕೊಪ್ಪದಿಂದ ಬೆಕ್ಕೆಸೊಡ್ಲೂರಿಗೆ ಬರುತ್ತಿದ್ದೆವು, ಆ ಸಮಯದಲ್ಲಿ ಪೊನ್ನಂಪೇಟೆ-ಗೋಣಿಕೊಪ್ಪ ಮುಖ್ಯ ರಸ್ತೆ ಬಳಿ ಸರ್ವದೈವತಾ ಶಾಲೆಯ ಬಳಿ ಬರುವಾಗ ಎದುರುಗಡೆಯಿಂದ ಬಂದ ಸ್ಪೆಲೆಂಡರ್ ಬೈಕ್ ಒಂದು ನಮ್ಮ ಗಾಡಿಗೆ ಡಿಕ್ಕಿಪಡಿಸಿತು ಅದರ ಪರಿಣಾಮ ಸದರಿ ವಾಹನದ ಚಾಲಕನಿಗೆ ಹಾಗೂ ನಮಗೆ ಗಾಯಗಳಾಗಿ ಸ್ಥಳದಲ್ಲೇ ಪ್ರಜ್ಞೆ ತಪ್ಪಿದೆವು, ನಂತರ ಗಾಯಾಳುವನ್ನು ಮತ್ತು ನಮ್ಮನ್ನು ಅಲ್ಲಿದ್ದ ಸಾರ್ವಜನಿಕರು ಗೋಣಿಕೊಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋದರು, ಅಲ್ಲಿ ವೈದ್ಯರು ಹೆಚ್ಚಿನ ಚಿಕಿತ್ಸೆಗೆಗಾಗಿ ಮೈಸೂರಿಗೆ ಕರೆದುಕೊಂಡು ಹೋಗಲು ತಿಳಿಸಿದ ನಂತರ ನನ್ನನ್ನು ಮತ್ತು ಆರೋಪಿಯನ್ನು ಮೈಸೂರಿನ ವೃಂದಾವನ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದ ಬಗ್ಗೆ ನನಗೆ ನಂತರದಲ್ಲಿ ತಿಳಿಯಿತು. ಸದರಿ ಅಪಘಾತವು ಎದುರುಗಡೆಯಿಂದ ಬಂದ ವಾಹನದ ಚಾಲಕನ ತಪ್ಪಿನಿಂದಲೇ ಆಗಿರುತ್ತದೆ. ಈ ಪ್ರಕರಣದ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿದ್ದಾರೆ. ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ, ಸಾಕ್ಷಿಯು ಗುರುತಿಸಿರುವ ದಾಖಲೆಯು ಸ್ವತ್ತು ಬಿಡುಗಡೆ ಮಹಜರ್ ಆಗಿದ್ದು ಅದನ್ನು ಈಗ ನಿ ಪಿ 17, ಸಾಕ್ಷಿಯ ಸಹಿಯನ್ನು ನಿ ಪಿ 17 ಎ ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ, ಅದರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ಹಾಗೂ ಸ.ಸ.ಅ.ರವರ ವಾದವನ್ನು ಆಲಿಸಿ ಸಾಕ್ಷಿಯನ್ನು ಭಾಗಶಃಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

<u>ಪಾಟೀ ಸವಾಲುಃ- ಮಾನ್ಯ ಸ ಸ ಅ ರವರಿಂದ</u> ಃ-

ನಾನು ಮತ್ತು ಆರೋಪಿ ಸ್ನೇಹಿತರು ಎಂದರೆ ಸರಿ, ಆ ದಿನ ನಾನು ಮತ್ತು ಆರೋಪಿಯು, ಆರೋಪಿಗೆ ಸೇರಿದ ಕೆ ಎ 12 ಆರ್ 9533 ರ ಹೊಂಡಾ ಆಕ್ಟೀವಾ ಸ್ಕೂಟಿಯಲ್ಲಿ ಹೋಗುತ್ತಿದ್ದೆವು ಎಂದರೆ ಸರಿ. ಆ ದಿನ ಅಪಘಾತಕ್ಕೀಡಾದ ಬೈಕ್ ನ ಸಂ. ಕೆ ಎ 54 ಎ 1652 ಟಿವಿಎಸ್ ಸ್ಟಾರ್ ಸಿಟಿ ಬೈಕ್ ಆಗಿದ್ದು ಅದು ಸ್ಪೆಲೆಂಡರ್ ಬೈಕ್ ಅಲ್ಲ ಎಂದರೆ ಆ ಸಮಯದಲ್ಲಿ ನನಗೆ ಯಾವ ಬೈಕ್ ಅಂತ ಸರಿಯಾಗಿ ಗೊತ್ತಾಗಲಿಲ್ಲ ಎಂದು ಹೇಳುತ್ತಾರೆ. ಆ ದಿನ ಆರೋಪಿಯು ತನ್ನ ವಾಹನವನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿದ್ದರಿಂದಲೇ ಅಪಘಾತವಾಗಿ ಟಿವಿಎಸ್ ಬೈಕ್ ನ ಚಾಲಕ ಗಾಯಗೊಂಡು ನಂತರದಲ್ಲಿ ಆಸ್ಪತ್ರೆಯಲ್ಲಿ ಮೃತ ಹೊಂದಿದ್ದಾರೆ ಎಂದರೆ ಸರಿಯಲ್ಲ. ಆ ದಿನ ನನ್ನನ್ನು ಮತ್ತು ಆರೋಪಿ ಹಾಗೂ ಸ್ಟಾರ್ ಸಿಟಿ ಬೈಕ್ ನ ಚಾಲಕನನ್ನು ಒಟ್ಟಾಗಿ ಅಂಬುಲೆನ್ಸ್ ನಲ್ಲಿ ಗೋಣಿಕೊಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಅಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಗಾಯಾಳು ಸುಬ್ರಮಣಿರವರು ನಂತರದಲ್ಲಿ ತೀರಿಕೊಂಡರು ಎಂದರೆ ಸರಿ. ಸಾಕ್ಷಿಯು ನಿ ಪಿ 13 ರಿಂದ 16 ರ ಫೋಟೋಗಳಲ್ಲಿರುವ ಆಕ್ಟಿವ ಮತ್ತು ಸ್ಟಾರ್ ಸಿಟಿ ಬೈಕ್ ಅನ್ನು ಗುರುತಿಸಿ ಆ ದಿನ ಆರೋಪಿಯು ಚಲಾಯಿಸುತ್ತಿದ್ದ ಹೊಂಡಾ ಆಕ್ಟೀವಾ ನಿಪಿ 13 ರಲ್ಲಿ ಇದೆ ಮತ್ತು ನಿ ಪಿ 16 ರಲ್ಲಿ ಎದುರುಗಡೆಯಿಂದ ಬಂದ ವಾಹನದ ಫೋಟೋ ಆಗಿರುತ್ತದೆ ಎಂದು ಹೇಳಿರುತ್ತಾರೆ. ನಿ ಪಿ 17 ರ ಮಹಜರ್ ಗೆ ಆರೋಪಿಯು ತನ್ನ ವಾಹನವನ್ನು ಪೊಲೀಸ್ ವಶದಿಂದ ಬಿಡಿಸಿಕೊಳ್ಳುವಾಗ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಆರೋಪಿಯು ನನ್ನ ಸ್ನೇಹಿತನಾಗಿರುವ ಕಾರಣ ಈಗ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

<u>ಮರು ವಿಚಾರಣೆ ಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.